# <u>ಆಗಸ್ಟ್, 2016 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು</u>

- ಮೊದಲ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ **49** ಕೆ.ಜಿ ಯೂರಿಯಾ, **71** ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, **38** ಕೆ.ಜಿ. ಮೂರೆಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು **7** ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ.

- ಎರಡನೇ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ **99** ಕೆ.ಜಿ ಯೂರಿಯಾ, **142** ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, **76** ಕೆ.ಜಿ. ಮೂರೆಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು **14** ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ .

- ಮೂರನೇ ವರ್ಷದ ತಾಳೆ ತೋಟಕ್ಕೆ ರಸಗೊಬ್ಬರವನ್ನು ಪ್ರತಿ ಎಕರೆಗೆ **148** ಕೆ.ಜಿ ಯೂರಿಯಾ, **213** ಕೆ ಜಿ ಸಿಂಗಲ್ ಸೂಪರ್ ಫಾಸ್ಫೇಟ್, **114** ಕೆ.ಜಿ. ಮೂರೆಟ್ ಆಫ್ ಪೊಟಾಷ್ ಗಳನ್ನು ನಾಲ್ಕು ಕಂತಿನಲ್ಲಿ ಮತ್ತು **28** ಕೆ.ಜಿ ಮೆಗ್ನೀ ಷಿಯಂ ಸಲ್ಫೇಟ್ ಗೊಬ್ಬರವನ್ನು ಎರಡು ಕಂತಿನಲ್ಲಿ ನೀಡುವುದು ಸೂಕ್ತ.

- ತಾಳೆ ಗಿಡಗಳಿಗೆ ಪ್ರತಿ **3** ತಿಂಗಳಿಗೊಮ್ಮೆ ಗೊಬ್ಬರಗಳನ್ನು ನೀರಾವರಿ ಪ್ರದೇಶಗಳಲ್ಲಿ ನೀಡಬೇಕು.

- ರಾಸಾಯನಿಕ ಗೊಬ್ಬರಗಳನ್ನು ತಾಳೆ ಮರದ ಕಾಂಡದಿಂದ **50** ಸೆಂ ಮೀ ದೂರದಲ್ಲಿ ಕಳೆ ರಹಿತ ಪಾತಿಯಲ್ಲಿ ಹರಡುವುದು ಮತ್ತು ಮಣ್ಣಿನ ಮೇಲ್ಪದರದೊಂದಿಗೆ ಬೆರೆಸಿ ಪಾತಿಯಲ್ಲಿ ನೀರುಣಿಸುವುದು

- ಆಗ ತಾನೆ ನಾಟಿ ಮಾಡಿದ ತಾಳೆ ಸಸಿಗಳಿಗೆ ಮೊದಲ ಕಂತಿನ ರಸಗೊಬ್ಬರವನ್ನು **3** ತಿಂಗಳ ನಂತರ ನೀಡುವುದು. ಪ್ರತಿ ತಾಳೆ ಮರಕ್ಕೆ **50** ರಿಂದ **100** ಕೆ ಜಿ ಕೊಟ್ಟಿಗೆ ಗೊಬ್ಬರ ಅಥವಾ **100** ಕೆ ಜಿ ಹಸಿರೆಲೆ ಗೊಬ್ಬರ ವನ್ನು ಎರಡನೇ ಕಂತಿನ ರಸಗೊಬ್ಬರ ನೀಡುವ ಸಂದರ್ಭದಲ್ಲಿ ನೀಡುವುದು. ಪ್ರತಿ ತಾಳೆ ಮರಕ್ಕೆ ಪ್ರತಿ ವರ್ಷಕ್ಕೆ **5** ಕೆ ಜಿ ಬೇವಿನ ಹಿಂಡಿ ಗೊಬ್ಬರವನ್ನು ನೀಡುವುದು ಉತ್ತಮ.